**09 -**

**ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**<u>ಪಾಟೀ ಸವಾಲು</u> :- ಪ್ರತಿ**ವಾದಿ ಪರ ಶ್ರೀ ಬಿ.ಎಸ್. ವಕೀಲರಿಂದ.

ಮುಂದುವರೆದ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಆಂಗ್ಲಭಾಷೆಯಲ್ಲಿ ಇದ್ದು ಅದರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ನಿಪಿ-21 ಅನ್ನು 5-6 ವರ್ಷಗಳ ಹಿಂದೆಯೆ ಪಡೆದಿರುತ್ತೇನೆ. ನಿಪಿ-22 ಹಿಂಬರಹ ಯಾವ ಕಾರಣಕ್ಕಾಗಿ ಪಡೆದಿರುತ್ತೀರೀ ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ಇಲಾಖೆಯಲ್ಲಿ ಫಾರಂ ನಂ.10 ಆಗಿರುವುದಿಲ್ಲ ಎಂದು ನೀಡಿದ ಕುರಿತು ಇರುತ್ತದೆ. ಸದರಿ ಹಿಂಬರಹದಲ್ಲಿ ಸರ್ವೆ ನಂ.51/1, 51/2 ಫಾರಂ ನಂ.10 ಆಗಿದ್ದು ಸರ್ವೆ ನಂ.51/3 ರಲ್ಲಿ ಫಾರಂ ನಂಬರ್ 10 ಆಗಿರುವುದಿಲ್ಲ ಎಂದು ನಮೂಧಿಸಿ ಹಿಂಬರಹ ನೀಡಿರುತ್ತಾರೆ ಅಂದರೆ ಸಾಕ್ಷಿ ಸಾಕ್ಷಿ 3 ಜಮೀನುಗಳಲ್ಲಿ ಫಾರಂ ನಂ.10 ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-22 ರಲ್ಲಿ ಸರ್ವೆ ನಂ.51/1 ಮತ್ತು 51/2 ರ ಕುರಿತಾಗಿ ಫಾರಂ ನಂ.10 ಆಗಿರುತ್ತದೆ ಎಂದು ನಮೂಧಿಸಿರುವುದು ಸುಳ್ಳು ಇರುತ್ತದೆ. ಸರ್ವೆ ನಂ.51/3 ರಲ್ಲಿ ಫಾರಂ ನಂ.10 ಆಗಿರುವುದಿಲ್ಲ ಎಂದು ಸುಳ್ಳು ಬರೆದಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಹಿಂಬರಹಕ್ಕಾಗಿ ಸಲ್ಲಿಸಿದ ಅರ್ಜಿ ಕಚೇರಿಗೆ ನೀಡಿ ಅಂದಾಜು 5-6 ವರ್ಷ ಆಗಿರಬಹುದು. ಹಿಂಬರಹವನ್ನು ದಾವೆಗೋಸ್ಕರ ಸೃಷ್ಠಿಸಿರುತ್ತೇನೆ ಅಂದರೆ ಸರಿಯಲ್ಲ.

ಸ.ನಂ.48 ರಹೀಮಾನ್ ಸಾಬನ ಹೆಸರಿನಲ್ಲಿ ಪಹಣಿ ಇರುತ್ತದೆ. ಸ.ನಂ.49 ಸಣ್ಣಯ್ಯನ ಹೆಸರಿನಲ್ಲಿ ಪಹಣಿ ಇರುತ್ತದೆ. ದಾವಾ ಜಮೀನು ಸರ್ವೆ ನಂ 48 ಮತ್ತು 49 ಆಗಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಜಮೀನಿಗೆ ಸಂಬಂಧ ಇರದೇ ಇರುವ ಸರ್ವೆ ನಂ.48 ಮತ್ತು 49 ರ ಪಹಣಿಗಳನ್ನು ಹಾಜರು ಪಡೆಸಿರುತ್ತೇನೆ ಅಂದರೆ ಸರಿಯಲ್ಲ. ಸರ್ವೆ ನಂ.48 ರಹೀಮಾನ್ ಸಾಬನ ಹೆಸರಿನಲ್ಲಿ ಮತ್ತು ಸ.ನಂ.49 ಸಣ್ಣಯ್ಯನ ಹೆಸರಿನಲ್ಲಿ ಪಹಣಿಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪ್ರತಿವಾದಿ ಮಹಿಬೂಬ್ ಸಾಬ್ ಜಮೀನನ್ನು ವಿರುಪಣ್ಣ ತಂದೆ ನಾಗಪ್ಪ ಇವರಿಂದ ಖರೀದಿಸಿರುತ್ತಾನೆ ಅಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಜಮೀನಿನ ವಿಸ್ತೀರ್ಣ 11 ಎಕರೆ 03 ಗುಂಟೆ ಎಂದು ಇರುತ್ತದೆ. ಸದರಿ ಖರೀದಿ ಪತ್ರದಲ್ಲಿ 11 ಎಕರೆ 30 ಗುಂಟೆ ಎಂದು ನಮೂಧಿಸಿರುತ್ತದೆ ಅಂದರೆ ಸಾಕ್ಷಿ ತಪ್ಪು ಇರುತ್ತದೆ ಎಂದು ನುಡಿಯುತ್ತಾರೆ. ಮಹಿಬೂಬ್ ಸಾಬನಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ವಿರುಪಣ್ಣನ ಹೆಸರಿನಲ್ಲಿ ಸರ್ವೆ ನಂ.51/ಅ ಕ್ಷೇತ್ರ 11 ಎಕರೆ 03 ಗುಂಟೆ ಇತ್ತು. ದಾಖಲೆಗಳನ್ನು ನೋಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ನಿಪಿ-1 ರಿಂದ 3 ಪಹಣಿಗಳಲ್ಲಿ ವಿರುಪಣ್ಣನ ಹೆಸರಿಗೆ 11 ಎಕರೆ 30 ಗುಂಟೆ ಇರುತ್ತದೆ ಅಂದರೆ ಸರಿಯಲ್ಲ. ವಿರುಪಣ್ಣನ ಹೆಸರಿಗೆ ತಪ್ಪಾಗಿ 11 ಎಕರೆ 30 ಗುಂಟೆ ಆಗಿರುತ್ತದೆ ಎಂದು ಆತನ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ವಿರುಪಣ್ಣ ಜೀವಿತ ಇಲ್ಲದೇ ಇರುವುದರಿಂದ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ವಿರುಪಣ್ಣ ಜೀವಿತ ಇರುವ ವರೆಗೂ ಯಾವುದೇ ಪ್ರಕರಣ ದಾಖಲಿಸಿಲ್ಲ ಅಂದರೆ ಸಾಕ್ಷಿ ಸದರಿ ಕ್ಷೇತ್ರದಲ್ಲಿ ತಪ್ಪಾಗಿರುವುದು ನಮಗೆ ತಿಳಿಯುವಷ್ಟರಲ್ಲಿ ವಿರುಪಣ್ಣ ಮೃತ ಪಟ್ಟಿದ್ದ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನನ್ನ ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂಧಿಸಿಲ್ಲ. ವಿರುಪಣ್ಣ ತನ್ನ ಹೆಸರಿನಲ್ಲಿ ಇದ್ದ 11 ಎಕರೆ 30 ಗುಂಟೆ ಜಮೀನನ್ನು ಮಹಿಬೂಬ್ ಸಾಬನಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಸರಿಯಲ್ಲ.

ಮೊದಲು ವಿರುಪಣ್ಣನ ಹೆಸರಿನಲ್ಲಿ ಒಟ್ಟು 23 ಎಕರೆ 03 ಗುಂಟೆ ಜಮೀನು ಇತ್ತು ಅಂದರೆ ಸರಿ. ವಿರುಪಣ್ಣನಿಂದ ಸಂಗಣ್ಣನ ಹೆಸರಿಗೆ ಯಾವ ಆಧಾರದ ಮೇಲೆ ಮುಟೇಷನ್ ಆಗಿರುತ್ತದೆ ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಮೂಲ ಮಾಲೀಕನಿಂದ ಮಹಿಬೂಬ್ ಸಾಬ್ 11 ಎಕರೆ 30 ಗುಂಟೆ ಜಮೀನನ್ನು ಕಾನೂನು ಬದ್ಧವಾಗಿ ಖರೀದಿ ಪಡೆದಿದ್ದು ಆತನೇ ಮಾಲೀಕ ಮತ್ತು ಕಬ್ಜೆದಾರನಾಗಿರುತ್ತಾನೆ ಅಂದರೆ ಸರಿಯಲ್ಲ. ವಾದ ಪತ್ರದಲ್ಲಿ ಮಹಿಬೂಬ್ ಸಾಬ್ 11 ಎಕರೆ 03 ಗುಂಟೆ ಮಾತ್ರ ಖರೀದಿಸಿರುತ್ತಾನೆ ಎಂದು ಸುಳ್ಳು ಬರೆಸಿರುತ್ತೇನೆ ಅಂದರೆ ಸರಿಯಲ್ಲ. ಮಹಿಬೂಬ್ ಸಾಬ್ ತಪ್ಪಾಗಿ 11 ಎಕರೆ 30 ಗುಂಟೆಗೆ ಮುಟೇಷನ್ ಮಾಡಿಸಿಕೊಂಡಿರುತ್ತಾನೆ ಎಂದು ಸುಳ್ಳಾಗಿ ಬರೆಸಿರುತ್ತೇನೆ ಅಂದರೆ ಸರಿಯಲ್ಲ. ತಪ್ಪು ತಿಳುವಳಿಕೆಯಿಂದ ದಾಖಲೆಗಳನ್ನು ಪರಿಶೀಲಿಸದೇ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

OS No.57/2011
PW-1